# O.S.No.105/2017 PW.1

ದಿಃ **13-09-2024** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. **MBK** ವಕೀಲರವರಿಂದಃ

ಸರ್ವೇ ನಂಬರ **146** ರಲ್ಲಿ ಒಟ್ಟು ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ಈ ಸರ್ವೇ ನಂಬರನಲಿ ಎಷ್ಟು ಹಿಸ್ಸೇ ಇದೆ ಎಂದು ನನಗೆ ಗೊತ್ತಿರುವುದಿಲ್ಲ. ಈ ದಾವಾ ಸ್ವತ್ತೀನ ನಾಲ್ಕು ಕಡೆಗೆ ಯಾವ ಸರ್ವೇ ನಂಬರ ಬರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ದಾವಾ ಸ್ವತ್ತೀನ ಹದ್ದುಬಸ್ತ ಮಾಡಿಸಲು ಅರ್ಜಿಯನ್ನು ನಾನು ಸಲ್ಲಿಸಿರುವುದಿಲ್ಲ. ದಾವಾ ಸ್ವತ್ತೀನ ಸರ್ವೇ ನಂಬರ **146** ಜೆ.**24** ಸೆಂಟ್ಸ **1993-1994** ರಿಂದ **2023-2024** ರ ವರೆಗೆ ಪ್ರತಿವಾದಿಯ ತಂದೆ ಮೃತ ಕೋಗಣೂರ ಶೇಖರಪ್ಪ ತಂದೆ ದೊಡ್ಡಬಸಪ್ಪ ಇವರ ಹೆಸರು ನಮೂದು ಇದೆ ಎಂದರೆ ಅವರು ಫೋರ್ಜರಿ ಮಾಡಿಕೊಂಡಿರುತ್ತಾರೆ. ಫೋರ್ಜರಿ ಮಾಡಿಕೊಂಡಿರುವ ಬಗ್ಗೆ ನನಗೆ **2016** ರಲ್ಲಿ ನಮಗೆ ಗೊತ್ತಾಗಿರುತ್ತದೆ. ಈ ಮಾತು ಸುಳ್ಳು ಎಂದರೆ ಸರಿಯಲ್ಲ. **1992-1993** ಕ್ಕೆ ಪ್ರತಿವಾದಿಯ ತಂದೆಯ ಹೆಸರು ಪಹಣಿಯಲ್ಲಿ ಬಂದಾಗ ತಕರಾರನ್ನು ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಆಗ ಮಾಡಿರುವುದಿಲ್ಲ **10-12** ವರ್ಷಗಳ ನಂತರ ತಕರಾರನ್ನು ಮಾಡಿರುತ್ತೇವೆ. ತಕರಾರನ್ನು ನಾವು ನ್ಯಾಯಾಲಯಕ್ಕೆ ಬಂದು ಪ್ರಕರಣವನ್ನು ಸಲ್ಲಿಸುವ ಮೂಲಕ ಮಾಡಿರುತ್ತೇವೆ. ಪ್ರತಿವಾದಿಯ ತಂದೆಯ ಹೆಸರು ಪಹಣಿಯಲ್ಲಿ ನಮೂದಾದ ನಂತರ ನಾವು ಕಂದಾಯ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ಪ್ರತಿವಾದಿಯ ತಂದೆ ಯಾವ ಇಸವಿಯಲ್ಲಿ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಈಗ ಅವರು ಮೃತ ಹೊಂದಿರುತ್ತಾರೆ. ಪ್ರತಿವಾದಿಯ ತಂದೆಯವರೆಗೆ ಒಟ್ಟು ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣುಮಗಳು ಇರುತ್ತಾಳೆ. ಪ್ರತಿವಾದಿಯ ತಂದೆಯವರೆಗೆ ಒಟ್ಟು **05** ಜನ ಮಕ್ಕಳು ಅದರಲ್ಲಿ **03** ಹೆಣ್ಣುಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು ಎಂದರೆ ನನಗೆ ಗೊತ್ತಿರುವುದಿಲ್ಲ. ಇಬ್ಬರು ಗಂಡು ಮಕ್ಕಳ ಪೈಕಿ ಒಬ್ಬರು ತೀರಿಕೊಂಡಿರುತ್ತಾರೆ ಎಂದರೆ ಸರಿ. ಮೃತ ಶೇಖಪ್ಪನ ಎಲ್ಲಾ ವಾರಸುದಾರರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಪ್ರತಿವಾದಿ ದಾವಾ ಸ್ವತ್ತಿನ ಕಬ್ಜಾ ಮತ್ತು

ವಹಿವಾಟಿನಲ್ಲಿ ಇರುವುದಕ್ಕೋಸ್ಕರ ಅವರನ್ನು ಮಾತ್ರ ಈ ದಾವೆಯಲ್ಲಿ ಸೇರಿಸಿರುತ್ತೇನೆ ಎಂದರೆ ಸರಿ. ಈ ದಾವಾ ಸ್ವತ್ತಿಗೆ ಸಂಬಂದಪಟ್ಟಂಗೆ ಪ್ರತಿವಾದಿಯ ತಂದೆ ಜೀವಂತ ಇರುವ ಕಾಲಕ್ಕೆ ಕಂದಾಯ ಕಟ್ಟುತ್ತಾ ಬಂದಿದ್ದು ಅವರು ತೀರಿದ ನಂತರ ಪ್ರತಿವಾದಿಯು ದಾವಾ ಸ್ವತ್ತೀನ ಕಂದಾಯ ಕಟ್ಟುತ್ತಿರುತ್ತಾರೆ ಎಂದರೆ ಇರಬಹುದು ಎಂದು ಸಾಕ್ಷಿಯು ನುಡಿಯುತ್ತಾರೆ. ಈಗ ಸಾಕ್ಷಿಗೆ ನಿ.ಪಿ.**04** ಪಹಣಿಯನ್ನು ತೋರಿಸಲಾಗಿ ಅದರಲ್ಲಿರುವ ಕಾಲಂ ನಂಬರ **11** ರಲ್ಲಿನ ಪಟ್ಟಾದಾರ ಕೋರ್ಟ ಆದೇಶದ ಮೇರೆಗೆ ಪ್ರತಿವಾದಿಯ ತಂದೆಯ ಹೆಸರು ನಮೂದು ಆಗಿರುತ್ತದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗಾಗಿ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದುಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ

"ನನ್ನ ಸಮಕ್ಷಮ"

**Sd/-**

(ಶ್ರೀಮತಿ ಅಕ್ಷತಾ ಟಿ.)
ದಿವಾಣಿ ನ್ಯಾಯಾಧೀಶರು,
ಹಡಗಲಿ.